**ದಿನಾಂಕ 08-1-2010 ರಂದು ಶುಕ್ರವಾರ, ಸಾಯಂಕಾಲ 4-00 ಗಂಟೆಗೆ ನಡೆದ ಅಂಕೋಲಾ ಪಟ್ಟಣ ಪಂಚಾಯತದ ಸಾಮಾನ್ಯ ಸಭೆಯ ನಡವಳಿಕೆಗಳು**

**ಹಾಜರಿದ್ದ ಸದಸ್ಯರು**

| | | |
|---|---|---|
| **1)** | ಫರ್ನಾಂಢೀಸ ಜುವಾನ ಸಾವೇರ | – **ಆಧ್ಯಕ್ಷರು** |
| **2)** | ಅನಿತಾ ಕೃಷ್ಣಾನಂದ ಬಂಟ | – ಉಪಾದ್ಯಕ್ಷರು |
| 3) | ಬಂಟ ಚಂದ್ರಕಾಂತ ಚೂಡಾಮಣಿ | – ಸದಸ್ಯರು |
| 4) | ರಾಜೇಂದ್ರ. .ವಿ. ನಾಯ್ಕ | – ,, |
| 5) | ಜಿ.ಎ.ಮಹಾಲಕ್ಷೀ ಲಕ್ಷೀ ನರಸಯ್ಯ | – ,, |
| 6) | ಶೇಕ ಶೇಮಶಾದ ಅಜಮುದ್ದಿನ ಶೇಖ | – ,, |
| 7) | ಅಜಿತ ಪಿ. ನಾಯ್ಕ | – ,, |
| 8) | ಅರುಣ ದಯಾನಂದ ನಾಡಕರ್ಣಿ | – ,, |
| 9) | ನಾಯಕ ಸುಮಿತಾ ಪಾಂಡುರಂಗ | – ,, |
| 10) | ಸದಾನಂದ ಕುಪ್ಪಯ್ಯ ಗುಡಿಗಾರ | – ,, |
| 11) | ಭಾಸ್ಕರ ಕೆ. ನಾರ್ವೇಕರ | – ,, |
| 12) | ಕೃಷ್ಣಕುಮಾರ ವೆಂಕಟೇಶ ಮಹಾಲೆ | – ,, |
| 13) | ಗೋಪಾಲಕೃಷ್ಣ ಸಿ. ನಾಯ್ಕ | – " |
| 14) | ಸವಿತಾ ಸೋಮು ಗೌಡ | – " |

ಠರಾವ ನಂ.201 ಸಭೆ ಪ್ರಾರಂಭಿಸುವ ಪೂರ್ವದಲ್ಲಿ ದಿನಾಂಕ 14-12-2009 ರಂದು ದೈವಾಧೀನರಾದ ಈ ಪಟ್ಟಣ ಪಂಚಾಯತಿಯ ಹಿಂದಿನ ಸದಸ್ಯರಾದ ಶ್ರೀ ನಾರಾಯಣ ವೆಂಕಣ್ಣ ನಾಯಕ ವಂದಿಗೆ, ಇವರ ಸ್ಮರಣಾರ್ಥ ಸಭೆಯು ಎರಡು ನಿಮಿಷ ಮೌನಾಚರಣೆ ಮಾಡುವದರೊಂದಿಗೆ ಶ್ರದ್ಧಾಂಜಲಿಯನ್ನು ಸಲ್ಲಿಸಿತು.

ಅದರಂತೆ ದಿನಾಂಕ 31-12-2009 ರಂದು ದೈವಾಧೀನರಾದ ಈ ಪಟ್ಟಣ ಪಂಚಾಯತಿಯ ಹಿಂದಿನ ಸದಸ್ಯರಾದ ಶ್ರೀ ದೇವಾ ಶಾಂಭಾ ಅಂಕೋಲೆಕರ, ಅಂಬಾರಕೊಡ್ಲ ಇವರ ಸ್ಮರಣಾರ್ಥ ಸಭೆಯು ಎರಡು ನಿಮಿಷ ಮೌನಾಚರಣೆ ಮಾಡುವದರೊಂದಿಗೆ ಶ್ರದ್ಧಾಂಜಲಿಯನ್ನು ಸಲ್ಲಿಸಿತು. <u>ಈ ಕುರಿತು ಅವರಿಗೆ ಸಂದೇಶವನ್ನು ಸಲ್ಲಿಸಲು ಮುಖ್ಯಾಧಿಕಾರಿಗಳಿಗೆ ಸೂಚಿಸಲಾಯಿತು.</u>

ಸೂ : ಅರುಣ ನಾಡಕರ್ಣಿ
ಅ : ಭಾಸ್ಕರ ಕೆ. ನಾರ್ವೇಕರ,

**<u>ಅಭಿನಂದನೆ</u>**

ಶ್ರೀ ಎಸ್. ಎಲ್. ಘೋಟ್ನೇಕರ, ಕ್ರೀಯಾಶೀಲ ಸದಸ್ಯರು, ಪಟ್ಟಣ ಪಂಚಾಯಹಳಿಯಾಳ, ಇವರು ಉತ್ತರ ಕನ್ನಡ ಜಿಲ್ಲೆಯ ವಿಧಾನ ಪರಿಷತ ಚುನಾವಣೆಯಲ್ಲಿ ವಿಜಯಾಗಿದ್ದರಿಂದ ಅವರ ಈ ಯಶಸ್ವಿಗಾಗಿ ಸಭೆಯು ಹೃತ್ಪೂರ್ವಕ ಅಭಿನಂದನೆಗಳನ್ನು ಸೂಚಿಸಿತು. ಈ ಕುರಿತು ಅವರಿಗೆ ಸಂದೇಶವನ್ನು ಸಲ್ಲಿಸಲು ಮುಖ್ಯಾಧಿಕಾರಿಗಳಿಗೆ ಸೂಚಿಸಲಾಯಿತು.

ಸೂ : ಅರುಣ ನಾಡಕರ್ಣಿ
ಅ : ರಾಜೇಂದ್ರ ನಾಯ್ಕ

**ಚರ್ಚಿಸತಕ್ಕ ವಿಷಯಗಳು**

**ವಿಷಯ ನಂ: 1** ದಿನಾಂಕ 20-11-2009 ರಂದು ಜರುಗಿದ ಸಾಮಾನ್ಯ ಸಭೆಯ ನಡವಳಿಕೆಗಳನ್ನು ಓದಿ ದೃಡೀಕರಿಸುವದು.

**ಠರಾವ ನಂ.-202** ದಿನಾಂಕ 20-11-2009 ರಂದು ಜರುಗಿದ ಸಾಮಾನ್ಯ ಸಭೆಯ ನಡವಳಿಕೆಗಳನ್ನು ದೃಡೀಕರಿಸಲಾಯಿತು.

**ವಿಷಯ ನಂ. 2** ನವೆಂಬರ ಮತ್ತು ಡಿಸೆಂಬರ 2009ರ ಜಮಾ–ಖರ್ಚನ್ನು ಪರೀಸೀಲಿಸಿ, ಮಂಜೂರಿ ನೀಡುವದು.

**ಠರಾವ ನಂ. 203** ನವೆಂಬರ ಮತ್ತು ಡಿಸೆಂಬರ 2009ರ ಜಮಾ–ಖರ್ಚನ್ನು ಪರೀಸೀಲಿಸಲಾಗಿ, ಅದರಂತೆ ಸಂಕ್ಷಿಪ್ತ ಮಾಹಿತಿಯುಳ್ಳ ಜಮಾ–ಖರ್ಚಿಗೆ ಸಭೆಯು ಒಪ್ಪಿಗೆ ನೀಡಿ , ಠರಾವು ಸರ್ವಾನುಮತದಿಂದ ಪಾಸಾಯಿತು.

| | | **ನವೆಂಬರ 2009** | **ಡಿಸೆಂಬರ 2009** |
|---|---|---|---|
| 1) ಆರಂಭದ ಶಿಲ್ಕು | ರೂ. | 5318759=00 | 6298618=00 |
| 2) ತಿಂಗಳ ಜಮಾ | ರೂ. | 883403=00 | 1056283=00 |
| 3) ಅಂತೂ ಜಮಾ | ರೂ. | 6876162=00 | 8028901=00 |
| 4) ತಿಂಗಳ ಖರ್ಚು | ರೂ. | 577544=00 | 1850253=00 |
| 5) ಕೊನೆಯ ಶಿಲ್ಕು | ರೂ. | 6298618=00 | 6178648=00 |

ಸೂ : ಅರುಣ ನಾಡಕರ್ಣಿ

ಅ : ಅಜಿತ ಪಿ. ನಾಯ್ಕ

ವಿಷಯ ನಂ. 3 ಅಂಕೋಲಾ ಪಟ್ಟಣ ಪ್ರದೇಶದ ವ್ಯಾಪ್ತಿಯಲ್ಲಿ ತಾತ್ಕಾಲಿಕ ಆಗ್ನಿ ಶಾಮಕ ಠಾಣೆಯನ್ನು ಪ್ರಾರಂಭಿಸುವ ಬಗ್ಗೆ ಜಿಲ್ಲಾ ಅಗ್ನಿಶಾಮಕ ಅಧಿಕಾರಿ, ಕರ್ನಾಟಕ ರಾಜ್ಯ ಆಗ್ನಿಶಾಮಕ ಮತ್ತು ತುರ್ತು ಸೇವೆಗಳು ಉತ್ತರಕನ್ನಡ ಕಾರವಾರ ರವರಿಂದ ಬಂದ ಪತ್ರದ ಕುರಿತು ಚರ್ಚಿಸುವದು.

ಠರಾವ ನಂ.204 ಜಿಲ್ಲಾ ಅಗ್ನಿಶಾಮಕ ಆಧಿಕಾರಿ, ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತೂರ್ತು ಸೇವೆಗಳು ಉತ್ತರಕನ್ನಡ ಜಿಲ್ಲಾ ಕಾರವಾರ ಇವರು ಅಂಕೋಲಾ ಪಟ್ಟಣ ಪಂಚಾಯತ ವ್ಯಾಪ್ತಿಯಲ್ಲಿ ಅಗ್ನಿ ಶಾಮಕ ಠಾಣೆಯನ್ನು ಸ್ಥಾಪಿಸಿ, ಪ್ರಾರಂಬಿಸಲು ಕೇಣಿಯಲ್ಲಿರುವ ಪಟ್ಟಣ ಪಂಚಾಯತ ಸ್ವಾಮಿತ್ವದ ಅಂಬೇಡಕರ ಭವನವನ್ನು ಮೂಲಭೂತ ಸೌಕರ್ಯಗಳೊಂದಿಗೆ ಒದಗಿಸಿ ಕೊಡುವಂತೆ ಕೋರಿ ಸಲ್ಲಿಸಿದ ಪತ್ರ ಕ್ರಮ ಸಂಖ್ಯೆ : 76/ಜಿಅಅ/ಉ.ಕ./2009 ದಿನಾಂಕ 10–12–2009ನೇದನ್ನು ಸಭೆಯಲ್ಲಿ ಓದಿ ಹೇಳಲಾಯಿತು.

ಸದ್ರಿ ವಿಷಯದ ಮೇಲೆ ಸಭೆಯಲ್ಲಿ ವ್ಯಾಪಕವಾಗಿ ಚರ್ಚಿಸಲಾಯಿತು. ಕಳೆದ ತಿಂಗಳು ಪಟ್ಟಣದ ಹೃದಯದ ಭಾಗದಲ್ಲಿ ಸಂಭವಿಸಿದ ಆಕಸ್ಮಿಕ ಅಗ್ನಿ ದುರುಂತದಲ್ಲಿ ಎರಡು ಅಂಗಡಿಗಳುಭಸ್ಮವಾಗಿರುವ ವಿಷಯವನ್ನು ಮನಗಂಡಸಭೆಯು ಸದ್ರಿ ಅಂಬೇಡಕರ ಭವನವನ್ನು ಅವರು ಸೂಚಿಸಿದ ಮೂಲಭೂತ ಸೌಕರ್ಯಗಳನ್ನು ಒದಗಿಸಿ ನೀಡುವಂತೆ ಒಪ್ಪಿಗೆ ಸೂಚಿಸ ಲಾಯಿತು. .

ಆದರೆ, ಸಭಾಸದಸ್ಯರಲ್ಲೊಬ್ಬರಾದ ಶ್ರೀ ಚಂದ್ರಕಾಂತ ಬಂಟರವರು ಅಲ್ಲಿರುವ ಅಂಗನವಾಡಿಗೆ ಪರ್ಯಾಯ ವ್ಯವಸ್ಥೆ ಬಗ್ಗೆ ವಿನಂತಿಸಿ ಕೊಂಡಾಗ ಕಾರ್ಯಾಲಯದಿಂದ ಪರ್ಯಾಯ ವ್ಯವಸ್ಥೆ ಮಾಡುವಂತೆ ಕಾರ್ಯಾಲಯಕ್ಕೆ ಸೂಚಿಸಿ,ಠರಾವನ್ನು ಸರ್ವಾನುಮತದಿಂದ ಪಾಸು ಮಾಡಲಾಯಿತು.

ಸೂ : ಭಾಸ್ಕರ ಕೆ. ನಾರ್ವೇಕರ,

ಅ : ಅರುಣ ನಾಡಕರ್ಣಿ

ವಿಷಯ ನಂ. 4 ಶ್ರೀ ಮಂಜೂನಾಥ ಎಲ್. ನಾಯ್ಕ ಗುತ್ತಿಗೆದಾರರು ಕುಮಟಾರವರ ಬಗ್ಗೆ ಕಾರ್ಯನಿರ್ವಾಹಕ ಇಂಜೀನೀಯರ ಕಚೇರಿ, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇವರಿಂದ ಬಂದ ಪತ್ರ ಕ್ರ.ಸಂ. ಕನಿಇಂ./ಲೋ.ವಿ./ಕಿ.ಇಂ.3/ಕಾಮಗಾರಿ ಪ್ರಪತ್ರ 2009/10 ನಂ.2830/ದಿನಾಂಕ 19–11–2009 ರ ಪತ್ರದ ಬಗ್ಗೆ ಚರ್ಚಿಸುವದು.

ಠರಾವ ನಂ.205 ಕಾರ್ಯನಿರ್ವಾಹಕ ಎಂಜೀನೀಯರ ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ವಿಭಾಗ ಕಾರವಾರ ಇವರಿಂದ ಬಂದ ಪತ್ರವನ್ನು ಸಭೆಗೆ ಮುಖ್ಯಾಧಿಕಾರಿಗಳು ಓದಿ ಹೇಳಿದರು. ಶ್ರೀ ಮಂಜೂನಾಥ ಎಲ್. ನಾಯ್ಕ ಗುತ್ತಿಗೆದಾರ ಇವರು ಈ ಮೇಲ್ಕಂಡ ಕಾರ್ಯಾಲಯದಿಂದ ಕಾಮಗಾರಿ ಪಡೆದು ಕೊಳ್ಳಲು ಪಟ್ಟಣ ಪಂಚಾಯತ ಕಾರ್ಯಾಲಯದಿಂದ ಪಡೆದುಕೊಂಡ ಕಾಮಗಾರಿ ದೃಢೀಕರಣ ಪತ್ರದ ಬಗ್ಗೆ ಪರೀಶೀಲಿಸಲಾಗಿ, ಒಂದು ದಾಖಲೆ ಪತ್ರ ಸುಳ್ಳು ಅಂತಾ ಸಭೆಯು ಮನಗಂಡಿತು. ಮಂಜೂನಾಥ ನಾಯ್ಕ ಇವರು ಕರ್ನಾಟಕ ಸರ್ಕಾರದ ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಮುಖ್ಯ ಇಂಜಿನೀಯರ,ಧಾರವಾಡ ಅವರಲ್ಲಿ ನೊಂದಾಯಿತ ಪ್ರಥಮದರ್ಜೆ ಗುತ್ತಿಗೆದಾರರಾಗಿದ್ದು ಇವರು ಒಬ್ಬ ಸುಶಿಕ್ಷಿತ ಪದವೀಧರರಿದ್ದು, ಈ ರೀತಿಯಲ್ಲಿ ಅವರು ಫೋರ್ಜರಿ ಪತ್ರವನ್ನು ಸೃಷ್ಟಿಸಿ,ಕಾಮಗಾರಿ ಪಡೆದು ಕೊಳ್ಳಲು ಪ್ರಯತ್ನಿಸಿದ್ದು, ಅಕ್ಷಮ ಅಪರಾಧವೆಂದು ಸಭೆಯು ಪರಿಗಣಿಸಿತು. ಹಾಗೂ ಸದ್ರಿ ಇಲಾಖೆಯಿಂದ ಪಡೆದ ನೋಂದಣಿಯನ್ನು ರದ್ದು ಪಡಿಸುವಂತೆ ಮುಖ್ಯ ಇಂಜಿನೀಯರವರ ಕಚೇರಿ ಸಂಪರ್ಕಮತ್ತು ಕಟ್ಟಡಗಳು (ಉತ್ತರ) ಸರ್.ಎಂ.ವಿಶ್ವೇಶ್ವರಯ್ಯ ಕಾರ್ಯಾಲಯ ಧಾರವಾಡ ಇವರ ಬಳಿಗೆ ಸಭೆಯು ಶಿಫಾರಸ್ಸು ಮಾಡಿತು. ಹಾಗೂ ಇವರು ಅಂಕೋಲಾ ಪಟ್ಟಣ ಪಂಚಾಯತಿಯಲ್ಲಿ ಮಾಡಿಕೊಂಡ ನೋಂದಣಿಯನ್ನು ತಕ್ಷಣದಿಂದ ರದ್ದು ಪಡಿಸುವಂತೆ ಹಾಗೂ ಈ ಮುಂದೆ ಇವರಿಗೆ ಯಾವುದೇ ರೀತಿಯ ಪಟ್ಟಣಪಂಚಾಯತ ಟೆಂಡರ ಕಾಮಗಾರಿಯಲ್ಲಿ ಭಾಗವಹಿಸದಂತೆ ಪ್ರತಿಬಂಧ ವಿಧೀಸಿತು. ಹಾಗೂ ಮಾಹಿತಿಗಾಗಿ ಈ ನಿರ್ಣಯದ ನಕಲನ್ನು 1) ಸಹಾಯಕ ಕಾರ್ಯನಿವಾಹಕ ಅಭಿಯಂತರರು, ಕಾರವಾರ ಮತ್ತು ಶಿರ್ಶಿ, ಉತ್ತರಕನ್ನಡ ಜಿಲ್ಲಾ 2) ಕಾರ್ಯನಿವಾಹಕ ಅಭಿಯಂತರರು ಜಿಲ್ಲಾಪಂಚಾಯತ ಇಂಜಿನೀಯರಿಂಗ ಕಾರವಾರ. 3) ಕಾರ್ಯನಿವಾಹಕ ಅಭಿಯಂತರರು ಬಂದರು ವಿಭಾಗ ಕಾರವಾರ 4) ಕಾರ್ಯನಿವಾಹಕ ಅಭಿಯಂತರರು, ಚಿಕ್ಕ ನೀರಾವರಿ, ಹಳಿಯಾಳ ಮತ್ತು 5)ಕಾರ್ಯ ನಿರ್ವಾಹಕ ಅಭಿಯಂತರರು ರಾಷ್ಟೀಯ ಹೆದ್ದಾರಿ,ಕಾರವಾರ ಇವರಿಗೆ ಮಾಹಿತಿಗಾಗಿ ಕಳುಹಿಸುವಂತೆ ಸಭೆಯು ಒಪ್ಪಿಗೆ ನೀಡಿ, ಠರಾವು ಸರ್ವಾನುಮತದಿಂದ ಪಾಸು ಮಾಡ ಲಾಯಿತು.

ಸೂ : ಅರುಣ ನಾಡಕರ್ಣಿ

ಅ : ಭಾಸ್ಕರ ನಾರ್ವೇಕರ.

ವಿಷಯ ನಂ. 5 ಡೆಪ್ಯೂಟಿಜನರಲ್ ಮ್ಯಾನೇಜರ ಬಿ.ಎಸ್.ಎನ್.ಎಲ್. ಮಂಗಳೂರುರವರು ಓಪಟಿಕಲ್ ಕೇಬಲ್ ಹಾಕುವ ಬಗ್ಗೆ ಪಟ್ಟಣದ ರಸ್ತೆ ಮತ್ತು ಪೈಪಲೈನನ್ನು ಅಗೆದು ಹನಿ ಮಾಡಿರುವ ಬಗ್ಗೆ ಚರ್ಚಿಸುವದು.

ಠರಾವ ನಂ.206 ಭಾರತ ಸಂಚಾರ ನಿಗಮ ಮಂಗಳೂರುರವರು ನಗರ ಪ್ರದೇಶದ ವ್ಯಾಪ್ತಿಯಲ್ಲಿ ಬೇಕಾಬಿಟ್ಟಿಯಾಗಿ ತಮ್ಮ ಇಲಾಖೆಯ ಕೇಬಲ ಅಳವಡಿಸಲು ಅಗೆದು ಹಾಕಿರುವದರಿಂದ ವಿಶ್ವ ಬ್ಯಾಂಕ ಯೋಜನೆಯಡಿಯಲ್ಲಿ ಕೋಟ್ಯಾಂತರ ರೂಪಾಯಿಗಳನ್ನು ವ್ಯಯ ಮಾಡಿ ನಿರ್ಮಿಸಿದ ರಸ್ತೆಗಳು ಪೂರ್ತಿಯಾಗಿ ಹಾಳು ಮಾಡಿರುವದರಿಂದ ಹಾಗೂ ಸಾರ್ವಜನಿಕರ ಕುಡಿಯುವ ನೀರಿನ ಪೈಪುಗಳು ಧಕ್ಕೆ ಮಾಡಿರುವದರಿಂದ ಈ ಎರಡು ಲೂಕ್ಸಾನುಗಳನ್ನು ಭರಿಸುವ ಕುರಿತು ವ್ಯಾಪಕ ವಾಗಿ ಚರ್ಚಿಸಲಾಯಿತು. ಸಭೆಯಲ್ಲಿ ಮುಖ್ಯಾಧಿಕಾರಿಗಳು ಸದ್ರಿ ವಿಷಯದ ಕುರಿತು ವಿವರಣೆ ಕೇಳಲಾಗಿ ಬಿಎಸ್.ಎನ್.ಎಲ್. ಇಲಾಖೆಯವರು ಈಗಾಗಲೆ ರಸ್ತೆ ಅಗೆಯುವ ಬಗ್ಗೆ ಜಿಲ್ಲಾಪರಿಷತ ಮತ್ತು ಲೋಕೋಪಯೋಗಿ ಇಲಾಖೆಗೆ ಭರಣ ಮಾಡಿರುವದರಿಂದ ಈ ಕಾರ್ಯಾಲಯದಲ್ಲಿ ಯಾವುದೇ ಪರವಾನಿಗೆ ಪಡೆಯದೇ ಇರುವದು ಈ ಮೇಲಿನ ಇಲಾಖೆಯ ಪರವಾನಿಗೆಯ ಮೇಲೆ ತಾವು ಕೆಲಸ ಮಾಡುತ್ತೇವೆಂದು ಉಪಗುತ್ತಿಗೆದಾರರು ತಿಳಿಸಿರುವದಾಗಿ ಹೇಳಿದಾಗ ಜಿಲ್ಲಾಪಂಚಾಯತ ಮತ್ತು ಲೋಕೋಪಯೋಗಿ ಇಲಾಖೆಗಳಿಗೆ ಭರಿಸಿದ ಹಣವನ್ನು ಈ ಕಾರ್ಯಾಲಯಕ್ಕೆ ಪಾವತಿ ಮಾಡುವಂತೆ ಸಂಬಂಧಪಟ್ಟ ಇಲಾಖೆಗಳಿಗೆ ಪತ್ರ ಬರೆಯಲು ಸಭೆಯು ಸೂಚಿಸಿ, ಠರಾವು ಸರ್ವಾನುಮತದಿಂದ ಪಾಸು ಮಾಡಲಾಯಿತು.

ಸೂ : ಅರುಣ ನಾಡಕರ್ಣಿ

ಅ : ಅಜಿತ ಪಿ. ನಾಯ್ಕ

ವಿಷಯ ನಂ. 6 ಸರ್ಕಾರಿ ದವಾಖಾನೆಯ ಹತ್ತಿರ ಅತಿಕ್ರಮಣ ಖುಲ್ಲಾ ಪಡಿಸಿ, ದವಾಖಾನೆಯ ಆವರಣವನ್ನು ಸ್ವಚ್ಛಗೋಳಿಸುವ ಬಗ್ಗೆ ಬಂದ ಬಿಲ್ಲುಗಳನ್ನು ಪರೀಶೀಲಿಸಿ, ಮಂಜೂರಿ ನೀಡುವದು.

ಠರಾವ ನಂ.207 ಪಟ್ಟಣ ಪಂಚಾಯತ ವ್ಯಾಪ್ತಿಯಲ್ಲಿ ಬರುವ ಸರ್ವೆನಂ. 4ಎ1ಎ1ಸಿ ನೇದರಲ್ಲಿ ಇರುವ ಅತಿಕ್ರಮಣವನ್ನು ಖುಲ್ಲಾಪಡಿಸಿದ ಬಗ್ಗೆ ಬಂದ ಬಿಲ್ಲು ಸಭೆಯಲ್ಲಿ ಪರೀಶಿಲಿಸಲಾಯಿತು. ಸದರ ಬಿಲ್ಲು ಸಮಂಜಸ ಇರುವದನ್ನು ಸಭೆಯು ಮನಗಂಡು ಪಟ್ಟಣ ಪಂಚಾಯತ ನಿಧಿಯಿಂದ ನೀಡಲು ಸಭೆಯು ಒಪ್ಪಿಗೆ ನೀಡಿ, ಠರಾವು ಸರ್ವಾನುಮತದಿಂದ ಪಾಸು ಮಾಡಲಾಯಿತು.

ಸೂ : ಸದಾನಂದ ಗುಡಿಗಾರ

ಅ : ಭಾಸ್ಕರ ನಾರ್ವೇಕರ

ವಿಷಯ ನಂ. 7 ಕಚೇರಿಯ ವಾಹನ (ಟ್ರಾಕ್ಟರ ನಂ.3267) ದುರಸ್ತಿ ಪಡಿಸುವ ಬಗ್ಗೆ ಕ್ರಮ ಜರುಗಿಸಿ ನಿರ್ಣಯ ಕೈಗೊಳ್ಳುವದು.

ಠರಾವ ನಂ.208 ಪಟ್ಟಣ ಪಂಚಾಯತ ಕಚೇರಿಯ ವಾಹನ (ಟ್ರಾಕ್ಟರ ನಂ.3267) ದುರಸ್ತಿ ಪಡಿಸುವ ಬಗ್ಗೆ ಕಿರಿಯ ಆರೋಗ್ಯ ನೀರೀಕ್ಷಕರ ವರದಿಯನ್ನು ಸಭೆಯು ಪರೀಶೀಲಿಸಿತು. ಸದರ ವಾಹನದ ಅಂದಾಜು ಪತ್ರಿಕೆ ಇಲ್ಲದೇ ಇರುವದರಿಂದ ಅಂದಾಜು ಪತ್ರಿಕೆ ತಯಾರಿಸಿ, ಮುಂದಿನ ಸಭಯಲ್ಲಿ ಇಡಲು ಸೂಚಿಸಲಾಯಿತು.

<u>**ಮಾನ್ಯ ಅಧ್ಯಕ್ಷರ ಅನುಮತಿಯ ಮೇರೆಗೆ ಬರಬಹುದಾದ ಇತರೇ ವಿಷಯಗಳು**</u>

ವಿಷಯ ನಂ.10/1 ಅಂಬಾರಕೊಡ್ಲದಲ್ಲಿ ತೆರೆದ ಬಾವಿಗೆ ಕಟ್ಟೆನಿರ್ಮಿಸುವದು ಹಾಗೂ ಹೆಚ್ಚುವರಿ ರಿಂಗ ಅಳವಡಿಸಲು ಮಂಜೂರಿ ನೀಡುವದು.

ಠರಾವ ನಂ.211 ಪಟ್ಟಣ ಪ್ರದೇಶದ ಅಂಬಾರಕೊಡ್ಲ ಭಾಗದಲ್ಲಿ ಈ ಕೆಳಗೆ ವಿವರಿಸಿದ ಐದು ಸಾರ್ವಜನಿಕ ಬಾವಿಗಳಿಗೆ ಕಟ್ಟೆ ಕಟ್ಟುವದು ಹಾಗೂ ಒಂದು ಸಾರ್ವಜನಿಕ ಬಾವಿಗೆ ಹೆಚ್ಚುವರಿ ಆರು ರಿಂಗಗಳನ್ನು ಅಳವಡಿಸಲು ಸಭೆಯಲ್ಲಿ ಆ ಭಾಗದ ಸದಸ್ಯರು ವಿನಂತಿಸಿದಂತೆ ಸದರ ಕಾಮಗಾರಿಯನ್ನು ನಿರ್ವಹಿಸಲು ಸಭೆಯು ಒಪ್ಪಿಗೆ ನೀಡಿ, ಠರಾವು ಸರ್ವಾನುಮತದಿಂದ ಪಾಸು ಮಾಡಲಾಯಿತು.

1) ತಿಮ್ಮಪ್ಪ ಮನೆಯ ಹತ್ತಿರದ ಸಾರ್ವಜನಿಕ ಬಾವಿಗೆ ಕಟ್ಟೆ ಕಟ್ಟುವದು.
2) ಬೇಡು ಗೌಡ ಮನೆಯಹತ್ತಿರದ ಸಾರ್ವಜನಿಕ ಬಾವಿಗೆ ರಿಂಗ ಅಳವಡಿಸುವದು.
3) ಕರಿಯಾಗೌಡ ಮನೆಯ ಹತ್ತಿರದ ಸರ್ವಜನಿಕ ಬಾವಿಗೆ ಕಟ್ಟೆ ಕಟ್ಟುವದು.
4) ಆಯು ಅಂಗಡಿಯ ಮನೆಯ ಮುಂದಿನ ಸಾರ್ವಜನಿಕ ಬಾವಿಗೆ ಕಟ್ಟೆ ಕಟ್ಟುವದು.
5. ನರಸಿಂಹ ಶೆಟ್ಟಿ ಅಂಗಡಿ ಹಿಂದುಗಡೆ ಸಾರ್ವಜನಿಕ ಬಾವಿಗೆ ಕಟ್ಟೆ ಕಟ್ಟುವುದು.

ವಿಷಯ ನಂ.10/2 ಪಟ್ಟಣ ಪ್ರದೇಶದ ಶೌಚಾಲಯ, ಸಭಾಭವನಗಳಿಗೆ ವಿದ್ಯೂತ್ತ ಮಿಟರ ಅಳವಡಿಸಿದ ಭಾಗ್ಯ ಜ್ಯೋತಿ ಇಲೆಕ್ಟೀಕಲ್ಸ ಅಂಕೋಲಾರವರ ಬಿಲ್ಲುರೂ. 14,680=00 ಪಾವತಿ ಮಾಡಲು ಮಂಜೂರಿ ನೀಡುವದು.

ಠರಾವ ನಂ.212 ಪಟ್ಟಣ ಪ್ರದೇಶದ ಈ ಕೆಳಗೆ ವಿವರಿಸಿದ ಭಾಗಗಳಿಗೆ ವಿದ್ಯೂತ ಮೀಟರ ಅಳವಡಿಸಲು ಸಭೆಯು ಒಪ್ಪಿಗೆ ನೀಡಿತು. ಹಾಗೂ ಬಂದ ಬಿಲ್ಲು ರೂ. 14680–00(ರೂ.ಹದಿನಾಲ್ಕು ಸಾವಿರದ ಆರನೂರಾ ಎಂಬತ್ತು) ಸಂದಾಯ ಮಾಡಲು ಒಪ್ಪಿಗೆ ನೀಡಿ, ಠರಾವು ಸರ್ವಾನುಮತದಿಂದ ಪಾಸು ಮಾಡಲಾಯಿತು.

1) ಹುಲಿದೇವರವಾಡಾ – ಶೌಚಾಲಯ
2) ಅಂಬಾರಕೊಡ್ಲ – ಸಭಾಭವನ
3) ಕಲ್ಲಭಾಗ – ಸಭಾಭವನ
4) ಪಿ.ಎಂ.ಎಚ್.ಎಸ್. ಸ್ಕೂಲ ಬಿಲಿಡಿಂಗ – ಬಸ್ಸ ಸ್ಟ್ಯಾಂಡ ಹತ್ತಿರ.
5) ಮಲ್ಲಕ್ಕಿಬೇಣ – ವೆಹಿಕಲ್ ಸ್ಟ್ಯಾಂಡ

ವಿಷಯ ನಂ.10/3 ಪಟ್ಟಣಪಂಚಾಯತಿಯ 1980 ರಿಂದ 1996ರ ಸಾಲಿನ ವರೆಗಿನ ಜನನ–ಮರಣ ದಾಖಲೆಗಳನ್ನು ಗಣಕಿಕೃತ ಗೊಳಿಸುವ ಕುರಿತು.

ಠರಾವ ನಂ.213 ಪಟ್ಟಣಪಂಚಾಯತಿಯ ಡಾಟಾ ಎಂಟ್ರಿ ಕುರಿತು ಒಟ್ಟೂ ರೂ. 25691=00 (ರೂ. ಎಪ್ಪತ್ತೈದು ಸಾವಿರದ ಆರನೂರಾತೊಂಬತ್ತೊಂದು) ವನ್ನು ಡಿಜಿಟಲ ಟೆಕ್ನೋಲೋಜಿ ಕಾರವಾರ ಇವರಿಗೆ ಸಂದಾಯ ಮಾಡಬೇಕಾಗಿತ್ತು. ಆದರೆ, ಮನ್ಯ ಜಿಲ್ಲಾಧಿಕಾರಿಗಳ ಪತ್ರ ಸಂಖ್ಯೆ ಪುರಸಭೆದ–1 ವಿವ–40/09–10 ದಿನಾಂಕ 31–10–2009ನೇದರಂತೆ ರೂ. 15000–00 ಮಂಜೂರಾಗಿದ್ದು ಪೂರ್ತಿ ಗಣಕೀಕರಣ ಗೊಳಿಸಿದ ಮೊತ್ತ ರೂ. 25691=00 ಆಗಿದ್ದು ಬಾಕಿ ಉಳಿದ ರೂ. 10691=00( ರೂ. ಹತ್ತು ಸಾವಿರದ ಆರನೂರಾ ತೋಂಬತ್ತೊಂದು) ಟೆಂಡರದಾರರಾದ ಡಿಜಿಟಲ ಟೆಕ್ನೋಲೋಜಿ ಕಾರವಾರ ಇವರಿಗೆ ಸಂದಾಯ ಮಾಡಲು ಒಪ್ಪಿಗೆ ನೀಡಿ, ಠರಾವು ಸರ್ವಾನುಮತದಿಂದ ಪಾಸು ಮಾಡಲಾಯಿತು.

ವಿಷಯನಂ.10/3ಅ ಪಟ್ಟಣ ನಗರ ಪ್ರದೇಶಗಳಲ್ಲಿ ಬಡಜನರಿಗೆ ವಸತಿ ಕಲ್ಪಿಸುವ ನಮ್ಮ ಮನೆ ಯೋಜನೆ ಅನುಷ್ಠಾನದ ಬಗ್ಗೆ.

ಠರಾವ ನಂ.213ಅ ಈ ಕುರಿತು ಸಭೆಯಲ್ಲಿ ಸುಧೀರ್ಘವಾಗಿ ಚರ್ಚಿಸಲಾಯಿತು. ಸಭೆಯು ಹಿಚ್ಚಿನ ಮಾಹಿತಿಗಾಗಿ ಜಾಹೀರಾತು ಪ್ರಕಟಣೆ ನೀಡಲು ಮುಖ್ಯಾಧಿಕಾರಿಗಳಿಗೆ ಸೂಚಿಸಿತು.

ವಿಷಯ ನಂ.10/4 ಜೈಹಿಂದ ಪ್ರೌಢಶಾಲೆಯ ಎದುರು ರಿಕ್ಷಾ ನಿಲ್ದಾಣವನ್ನು ಸ್ಥಳಾಂತರ ಗೊಳಿಸುವ ಬಗ್ಗೆ.

ಠರಾವ ನಂ.214 ಜೈಹಿಂದ ಪ್ರೌಢಶಾಲೆ ಅಂಕೋಲಾ ಇವರ ಮನವಿ ಪತ್ರ ದಿನಾಂಕ 31-12-2009ರಂದು ನೀಡಿದ ಪತ್ರವನ್ನು ಸಭೆಯಲ್ಲಿ ಓದಲಾಯಿತು. ಅದರಂತೆ ಸಭೆಯು ಮಾನ್ಯ ತಹಶೀಲದರರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ಕರೆಯುವಂತೆ ಪತ್ರ ಬರೆಯಲು ಸೂಚಿಸಿತು.

ವಿಷಯ ನಂ.10/5 ಕಚೇರಿಯ ಝರಾಕ್ಸ ಮಶೀನಿಗೆ ಕೆಟ್ರೇಜ ಅಳವಡಿಸುವ ಬಗ್ಗೆ ಬಂದ ಬಿಲ್ಲಿಗೆ ಮಂಜೂರಿ ನೀಡುವದು.

ಠರಾವ ನಂ.215 ಪಟ್ಟಣ ಪಂಚಾಯತ ಕಚೇರಿಯ ಶಾರ್ಫ ಝರೋಕ್ಸ ಮಶೀನಗೆ ಹೊಸದಾಗಿ ಕಾರಟೇಜ ಟ್ಯೂನರ ಅಳವಡಿಸಿ ಬಂದ ಬಿಲ್ಲು ರೂ. 8,300=00 (ರೂ. ಎಂಟು ಸಾವಿರದ ಮೂರನೂರು) ವನ್ನು ಶ್ರೀ ಆರ್. ವಿ. ಹೆಗಡೆ, ಸೇಲ್ಸ ಮತ್ತು ಸರ್ವಿಸ ಕುಮಟಾರವರಿಗೆ ಸಂದಾಯ ಮಾಡಲು ಒಪ್ಪಿಗೆ ನೀಡಿ, ಠರಾವು ಸರ್ವಾನುಮತದಿಂದ ಪಾಸು ಮಾಡಲಾಯಿತು.

ವಿಷಯ ನಂ.10/6 ಪಟ್ಟಣ ಪ್ರದೇಶದ ಕೇಣಿ ಭಾಗದಲ್ಲಿ ಎರಡು ಹ್ಯಾಂಡ ಪಂಪಗಳನ್ನು ಅಳವಡಿಸುವ ಕುರಿತು ಮಂಜೂರಿ ನೀಡುವದು.

ಠರಾವ ನಂ.216 ಪಟ್ಟಣ ಪ್ರದೇಶದ ಕೇಣಿ ಭಾಗದಲ್ಲಿ ಎರಡು ಹ್ಯಾಂಡ ಪಂಪಗಳನ್ನು ಅಳವಡಿಸುವ ಕುರಿತು ಮಾನ್ಯ ಉಪಾಧ್ಯಕ್ಷರು ಸಭೆಯಲ್ಲಿ ಸೂಚಿಸಿದರು. ಸದರ ಭಾಗದಲ್ಲಿ ನೀರಿನ ಹುಟ್ಟುವಳಿ ಮೇಲೆ ಇರುವದರಿಂದ ಎರಡು ಹ್ಯಾಂಡ ಪಂಪಗಳನ್ನು ಅಳವಡಿಸಲು ಸಭೆಯು ಒಪ್ಪಿಗೆ ನೀಡಿ, ಠರಾವು ಸರ್ವಾನುಮತದಿಂದ ಪಾಸು ಮಾಡಲಾಯಿತು.

ಸೂ : ಅನಿತಾ ಕೆ. ಬಂಟ

ಅ : ಮಾಹಾಲಕ್ಷ್ಮೀ ಲಕ್ಷ್ಮೀ ನರಸಯ್ಯ

ವಿಷಯ ನಂ.10/7 ಕೊಳಚೆ ಪ್ರದೇಶಗಳ ನಕ್ಷೆ ರಚನೆ ಹಾಗೂ ಕೊಳಚೆ ಪ್ರದೇಶದಲ್ಲಿರುವ ಕುಟುಂಬಗಳ ಜೀವನೋಪಾಯ ಸಮೀಕ್ಷೆ ಕುರಿತು.

ಠರಾವ ನಂ.217 ಮಾನ್ಯ ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ದಿಕೋಶ ಕಾರವಾರರವರ ಪತ್ರ ಸಂಖ್ಯೆ ಡಿ.ಯು.ಡಿ.ಸಿ. ಪುರಸಭೆ-1/ವಿವ 2009-10 ದಿನಾಂಕ 01-1-2010 ನೇದನ್ನು ಸಭೆಯಲ್ಲಿ ಓದಿ ಹೇಳಲಾಯಿತು. ಅದರಂತೆ ವಾರ್ಡ ಮಟ್ಟದಲ್ಲಿ ಸಭೆ ನಡೆಸಿ, ಸಾರ್ವಜನಿಕರಿಗೆ ಕೋಳಚೆ ಪ್ರದೇಶಗಳಲ್ಲಿ ಸಮಸ್ಯೆಗಳ ಬಗ್ಗೆ ಮಾಹಿತಿಯನ್ನು ನೀಡಲಾಯಿತು.

ವಿಷಯನಂ.10/8 ಬೋಬ್ರುವಾಡಾ ಸರ್ವೆ ನಂ. 147ರಲ್ಲಿ ಇರುವ ಗಿಡಗಳನ್ನು ಕಡಿಯುವರೇ ಈ ಬಗ್ಗೆ ಆನಾಕ್ಷೇಪಣೆ ಪತ್ರವನ್ನು ನೀಡುವ ಬಗ್ಗೆ.

ಠರಾವ ನಂ.218 ಈ ಹಿಂದೆ ಸಾಮಾನ್ಯ ಸಭೆಯ ಮಂಜೂರಿ ನಂ.184/15-10-2009ನೇದರಂತೆ ಪಹಣಿಪತ್ರದಲ್ಲಿ ಹಕ್ಕು ಬದಲಾವಣೆ ಮಾಡಲು ಅನಾಕ್ಷೇಪಣೆ ಪತ್ರವನ್ನು ನೀಡಿರುತ್ತಿದ್ದು ಪುನ: ಸದ್ರಿ ಜಾಗೆಯಲ್ಲಿ ರುವ ಗಿಡಗಳನ್ನು ಕಡಿತ ಮಾಡಲು ಅನಾಕ್ಷೇಪಣೆ ಪತ್ರ ನೀಡುವಂತೆ ಗ್ರಾಮಪಂಚಾಯತ ಬೋಬ್ರುವಾಡಾ ಇವರಿಂದ ಬಂದ ಪತ್ರವನ್ನು ಸಭೆಯ ಗಮನಕ್ಕೆ ತರಲಾಯಿತು. ಈ ಬಗ್ಗೆ ಕಚೇರಿಯ ವರದಿಯಂತೆ ಈಗಾಗಲೇ ಹಕ್ಕು ಬದಲಾವಣೆ ಮಾಡಲು ಅನಾಕ್ಷೇಪಣೆ ಪತ್ರ ನೀಡು ವದರಿಂದ ಪುನ: ಸದ್ರಿ ಜಾಗೆಯಲ್ಲಿರುವ ಆಸ್ತಿಗಳನ್ನು ವಿಲೇವಾರಿ ಮಾಡುವಂತೆ ಅನಾಕ್ಷೇಪಣೆ ಪತ್ರ ನೀಡಲುಬರಲಾರದೆಂದು ಸಭೆಯ ಅಭಿಪ್ರಾಯದೊಂದಿಗೆ ಠರಾವುಪಾಸುಮಾಡಲಾಯಿತು.

ಸೂ : ಅರುಣ ನಾಡಕರ್ಣಿ

ಅ : ಭಾಸ್ಕರ ನಾರ್ವೆಕರ

ವಿಷಯನಂ.10/9 ಶಾಲಾ ಮಕ್ಕಳಿಗೆ ಚಲನಚಿತ್ರೋತ್ಸವದ ಪ್ರಯುಕ್ತ ಚೋಕಲೇಟ ನೀಡಿದ ಬಿಲ್ಲು ರೂ. 20,000=00ಕ್ಕೆ ಒಪ್ಪಿಗೆ ನೀಡುವದು.

ಠರಾವು ನಂ.219 ಪಟ್ಟಣ ಪ್ರದೇಶದ ಶಾಲಾ ಮಕ್ಕಳಿಗೆ 11-1-2010 ರಿಂದ 15-1-2010ರ ವರೆಗೆ ಮಕ್ಕಳ ಚಲನಚಿತ್ರೋತ್ಸವ ಆಚರಿಸುವ ಕುರಿತು ಸಮರ್ಥ ಚಿತ್ರ ಮಂದಿರಕ್ಕೆ ಪಟ್ಟಣ ಪಂಚಾಯತ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಶಾಲಾ ಮಕ್ಕಳು ಭಾಗವಹಿಸಿದ ಶಾಲಾ ಮಕ್ಕಳಿಗೆ ಸಿಹಿ ತಿಂಡಿ ನೀಡಲು ಮಾನ್ಯ ತಹಶೀಲದಾರರು, ತಿಳಿಸಿದ ಪ್ರಯುಕ್ತ ಸಿಹಿ ತಿಂಡಿ ಖರೀದಿಸಿದ ಬಿಲ್ಲು ರೂ. 20,000=00 (ರೂ. ಇಪ್ಪತ್ತು ಸಾವಿರ) ಸಭೆಯು ಪರೀಶೀಲಿಸಿ ಮಂಜೂರಿ ನೀಡಿ, ಠರಾವು ಸರ್ವಾನುಮತದಿಂದ ಪಾಸು ಮಾಡಲಾಯಿತು.

ವಿಷಯನಂ.10/10 ಜಲಸಂಗ್ರಹಾಲಯದ ಹತ್ತಿರ 7.5ಎಚ್. ಪಿ. ಪಂಪಿಗೆ ತಾತ್ಕಾಲಿಕವಾಗಿ ಪಡೆದವಿದ್ಯೂತ್ ಜೋಡಣೆಯನ್ನು ಖಾಯಂ ಪಡೆಯುವದರ ಕುರಿತು ಮಂಜೂರಿ ನೀಡುವದು.

ಠರಾವು ನಂ.220 ಕೆಳ ಜಲಸಂಗ್ರಹಾಲಯದ ಮೇಲಿನ ಜಲಸಂಗ್ರಹಯಕ್ಕೆ ನೀರು ಪಂಪಿಂಗ ಮಾಡುವ ಬಗ್ಗೆ 7.5ಎಚ್.ಪಿ. ಪಂಪಿಗೆ ತಾತ್ಕಾಲಿಕವಾಗಿ ಜೋಡಣೆ ಪಡೆಯಲಾಗಿತ್ತು. ಇದರಿಂದ ಪ್ರತಿ ಯುನಿಟಿಗೆ ದರ ಹೆಚ್ಚಿಗೆ ಬರುವದರಿಂದ ಖಾಯಂ ಆಗಿ ಪಡೆಯಲು ಸಭೆಯು ಒಪ್ಪಿಗೆ ನೀಡಿತು. ಹಾಗೂ ಸದರ ಕೆಲಸವನ್ನು ಹೆಸ್ಕಂ ಗುತ್ತಿಗೆದಾರರಿಂದ ಮಾಡಿಸಿ ಕೊಳ್ಳಲು ಸಭೆಯು ಒಪ್ಪಿಗೆ ನೀಡಿ, ಠರಾವು ಪಾಸುಮಾಡಲಾಯಿತು.

**ಸಹಿ ಇದೆ.**
**ಅಧ್ಯಕ್ಷರು,**
**ಪಟ್ಟಣ ಪಂಚಾಯತ ಅಂಕೋಲಾ**

**ನಕಲು**

**ಮುಖ್ಯಾಧಿಕಾರಿ**
**ಪಟ್ಟಣ ಪಂಚಾಯತ ಅಂಕೋಲಾ**